ಗಾಂಧಿಗೇನಾದ್ರೂ ಟ್ರಾನ್ಸಫರ್ಮೇಷನ್ ಆಗ್ಬಿದೆಯೇನೋ? ಯಾಕೆ ಹುಷಾರಿಲ್ವೆನೋ...'' ಅಂಥದ್ದೇನೂ ಇಲ್ಲ ಕಣೊ, ಇವೊತ್ತು ಇವುಳ್ ಬೇರೆ ಸಾಯಿಬಾಬಾ ಟೆಂಪಲ್‌ಗೆ ಹೋಗ್ಬೇಕು ಅಂತಿದ್ಲು. ನಾಳೆ ನಾಡಿದ್ದು ನೋಡೋಣ...'' ಎಂದು ಫೋನ್ ಇಟ್ಟಿದ್ದೆ.

ಟೀ ಕುಡಿದು ಒಂದೆರಡು ಫೈಲುಗಳನ್ನು ನೋಡುವ ಹೊತ್ತಿಗೆ ನಾಲ್ಕೂವರೆ ಗಂಟೆಯಾಗಿತ್ತು. ಡ್ರೈವರ್‌ಗೆ ಫೋನ್ ಮಾಡಿ ಬರಲು ಹೇಳಿ ಮನೆಯ ಕಡೆ ಹೊರಟೆ. ಹೆಂಡತಿಯ ಮುಖದಲ್ಲಿ ನಗು ತೇಲಿತ್ತು. ಮುಖ ತೊಳೆದು ಬಾಬಾ ದೇವಸ್ಥಾನಕ್ಕೆ ಹೊರಡಲು ಸಿದ್ಧನಾಗುತ್ತಿದ್ದೆ. ಹೆಂಡತಿ ಕೊಟ್ಟ ಕಾಫಿ ಕುಡಿಯುತ್ತಾ ಟೀವಿ ಆನ್ ಮಾಡಿದ್ದೆ. ಅಷ್ಟರಲ್ಲಿ ಮೊಬೈಲ್ ಮೊಳಗಿತ್ತು. ಆಫೀಸ್ ನಂಬರ್ ಡಿಸ್‌ಪ್ಲೆ ಆಗುತ್ತಿತ್ತು. ''ಹಲೋ...'' ಎಂದಿದ್ದೆ. ''ಹಲೋ ಸಾರ್...'' ಆ ಕಡೆಯಿಂದ ಪವನ್‌ಕುಮಾರ್ ಧ್ವನಿ. ''ಹೇಳಿ ಪವನ್‌ಕುಮಾರ್...'' ಮೆಲ್ಲಗೆ ಕೇಳಿದ್ದೆ. ''ಸಾರ್, ನಿಮಗೆ ಟ್ರಾನ್ಸ್‌ಫರ್ ಆಗಿದೆ ಎಜುಕೇಷನ್ ಡಿಪಾರ್ಟ್‌ಮೆಂಟ್‌ಗೆ. ಅಲ್ಲಿಂದ ಹೇಮಾನಾಯಕ್‌ಗೆ ನಿಮ್ಮ ಜಾಗ ತೋರ್ಸಿದಾರೆ. ಹೇಮಾನಾಯಕ್ ಫೋನು ಮಾಡಿದ್ದರು. ನಾಳೆ ಬೆಳಿಗ್ಗೇನೆ ಬಂದು ರಿಪೋರ್ಟ್ ಮಾಡ್ಕೊತಾರಂತೆ. ಫಾರ್ಟಿ ಎಲ್‌ಕೆ ಕೊಟ್ಟಿದ್ರಂತೆ ಈ ಜಾಗಕ್ಕೆ ಬರೋಕೆ...'' ಪವನ್‌ಕುಮಾರ್ ಮಾತಿನಲ್ಲಿ ಖುಷಿ ತೇಲಾಡುತ್ತಿತ್ತು. ಮತ್ತೆ ಫೋನ್ ರಿಂಗಾಗಿತ್ತು. ಮನೋಹರ್ ನಂಬರ್. ''ಹಲೋ...'' ಎಂದೆ. ''ನಾನು ಕಣೋ, ಮನೇಲಿ ಇದ್ದೀಯಾ? ಡಾಕ್ಟರ್ ಭರತ್ ಅದೇ ಸೈಕಿಯಾಟ್ರಿಸ್ಟ್ ಜೊತೆ ಬರ್ತಾ ಇದೀನಿ. ಸೆಕ್ರೇಟರಿಯೆಟ್ ತುಂಬಾ ನಿಂದೇ ಮಾತು. ನಿನ್ ಮಿಸೆಸ್ ಕೂಡಾ ಮಧ್ಯಾಹ್ನ ಫೋನ್ ಮಾಡಿದ್ರು. ಒಂಥರಾ ಅಬ್‌ನಾರ್ಮಲ್ ಆಗಿ ಬಿಹೇವ್ ಮಾಡ್ತಿದ್ದೀಯಂತೆ. ಇರ್ಲಿ ಯಾವುದಕ್ಕೂ ಒಂದು ಸಿಂಪಲ್ ಕೌನ್ಸೆಲಿಂಗ್. ಸರಿಹೋದ್ರೆ ಅಲ್ಲಿಂದ ಬೌರಿಂಗ್ ಇನ್‌ಸ್ಟಿಟ್ಯೂಟ್ ಗೆ ಬಂದು ಬಿಡೋಣ... ನೋ ಫರ್ದರ್ ಸೇ...'' ಎಂದು ಫೋನ್ ಕಟ್ ಮಾಡಿದ್ದ. ಟೀವಿಯಲ್ಲಿ ಕೇರಳದ ಜಲಪ್ರಳಯದ ಭೀಕರ ದೃಶ್ಯಗಳು ಬಿತ್ತರವಾಗುತ್ತಿದ್ದವು...

### ಕೇಶವರೆಡ್ಡಿ ಹಂದ್ರಾಳ

ಕನ್ನಡದ ಪ್ರಸಿದ್ಧ ಮತ್ತು ಮಹತ್ವದ ಕತೆಗಾರ ಕೇಶವರೆಡ್ಡಿ ಹಂದ್ರಾಳ ಓದುಗರನ್ನು ದಶಕಗಳ ಕಾಲ ಹಿಡಿದಿಟ್ಟುಕೊಂಡ ಲೇಖಕ. 'ಹಂದ್ರಾಳ', 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ' ಅವರ ಕೆಲವು ಕಥಾಸಂಗ್ರಹಗಳು. 'ಒಕ್ಕಲ ಒನಪು', 'ಮರೆತ ಭಾರತ'– ಪ್ರಬಂಧ ಸಂಕಲನಗಳು. ಸಿನಿಮಾ, ಧಾರಾವಾಹಿಗಳಿಗೆ ಕಥೆ, ಸಂಭಾಷಣೆ ಬರೆದಿದ್ದಾರೆ. 'ನನ್ನ ಕ್ರಾಂತಿಯ ಹುಡುಗಿ' ಅವರ ಕವನ ಸಂಗ್ರಹ. ಈತನಕ 15 ಪುಸ್ತಕಗಳನ್ನು ಪ್ರಕಟಿಸಿದ್ದಾರೆ.